ಗೀತಾ ಬರ್ಲ, ಬೆಂಗಳೂರು

*ವಿವಾಹವಾಗಿ ಪತ್ನಿ ಪಕ್ಕಕ್ಕೆ ಬಂದರೂ ಅಮ್ಮನ ಸೆರಗು ಹಿಡಿದು ತಿರುಗುವ ಗಂಡಸರಿದ್ದಾರಲ್ಲಾ...?*



ಹೆಂಡತಿಯ ಸೆರಗೇ ಹಿಡಿಯಬಹುದಿತ್ತು; ಆದರೆ ಸಾಧ್ಯವಿಲ್ಲ. ಅವಳು ಧರಿಸುವುದು ಜೀನ್ಸ್!

ಎಂ.ಎನ್. ಸೋಮಶೇಖರ್, ಮೈಸೂರು

*ಕೋಣ ಹೇಗೆ ಯಮಧರ್ಮನ ವಾಹನವಾಯಿತು? ಇದರಲ್ಲಿ ವಿಶೇಷತೆ ಏನು?*

ಜಾಣತನ ಮರೆತು ಕೋಣ ಆದ್ದರಿಂದ! ಜೀವನದಲ್ಲಿ ಪಾಸ್ ಆಗದಿದ್ದವರಿಗೆ ಪಾಶ ಹಿಡಿದವನೇ bossಉ!

ಮಹೇಶ್ ಹೆಗಡೆ, ಹೆಗ್ಲೆ

*ಈಗಿನ ಹುಡುಗಿಯರು ಪದೇ ಪದೇ ಸಿಮ್ ಮತ್ತು ಬಾಯ್ ಫ್ರೆಂಡ್ ಬದಲಾಯಿಸುವುದು ಏಕೆ?*

ಅಟ್ರಾಕ್ಟಿವ್ ಆಫರ್ ನೀಡುವುದರಿಂದ!

ಕೆ.ಹೆಚ್. ರಾಮಕೃಷ್ಣಾರೆಡ್ಡಿ, ಯಲಹಂಕ

*ಗಂಡನ ಹತ್ತಿರ ಇರುವ ಅತ್ಯಮೂಲ್ಯವಾದ ವಸ್ತು ಯಾವುದು?*



ಹೆಂಡ-ತಿ!

ಡಿ.ಎಸ್. ಪಂಕಜಸುಬ್ರಮಣ್ಯ, ವಿಜಯನಗರ

*ಸಾರ್ವಜನಿಕರು ಮಕ್ಕಳನ್ನು, ಪ್ರಾಣಿಗಳನ್ನು ದತ್ತು ತೆಗೆದುಕೊಳ್ಳುವಂತೆ ರಾಜಕಾರಣಿಗಳೇಕೆ ದತ್ತು ತೆಗೆದುಕೊಳ್ಳುವುದಿಲ್ಲ?*

ಕುಲಗೆಟ್ಟ ಕುಲಕ್ಕೆ ಕುಲೋದ್ಧಾರಕ ಬೇಡವೆಂಬ ಉದಾತ್ತ ಗುಣ!

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

*ನಮ್ಮ ರಾಜ್ಯದ ರಸ್ತೆಗಳಿಗೂ, ಕೆಸರಿನ ಗದ್ದೆಗಳಿಗೂ ಏನು ವ್ಯತ್ಯಾಸ?*

ಕೆಸರಿನ ಗದ್ದೆಯಲ್ಲಿ ಕಂಬಳ ಆಡಬಹುದು, ರಾಜ್ಯದ ರಸ್ತೆಗಳಲ್ಲಿ ಹಂಡ್ರೆಡ್ ಮೀಟರ್ಸ್ ಹರ್ಡಲ್ಸ್!

ಓಂಕುಮಾರ್ ಬಿ. ಸ್ವಾಮಿ, ಬೀದರ್

*ಮನುಷ್ಯ ಹೆಣ್ಣು, ಹೊನ್ನು, ಮಣ್ಣುಗಳಿಂದ ಯಾವಾಗ ದೂರವಿರುತ್ತಾನೆ?*

ಕ್ಷೌರಿಕನ ಅಂಗಡಿಯ ಎತ್ತರದ ತಿರುಗುಕುರ್ಚಿಯಲ್ಲಿ ಕೂತಾಗ!

ಕೆ.ಮೈಥಿಲಿಕೃಷ್ಣ, ಬೆಂಗಳೂರು

*ಮಂಜುನಾಥನ ಮೇಲೆ ಆಣೆ ಮಾಡಿ ಹೇಳಿ - ಕುಮಾರ, ಎಡ್ಡಿ, ಸಿದ್ದು, ಈ ಮೂವರಲ್ಲಿ ಯಾರು ಸತ್ಯವಂತರು?*

ಕ್ಷಮಿಸಿ, ಯಾರನ್ನೇ ಸತ್ಯವಂತ ಎಂದರೂ ಮಂಜುನಾಥನಿಗೇ ಸಂಚಕಾರ ಒದಗೀತು!

ಎಸ್. ಸಿದ್ದೇಶ್, ಬೇಲೂರು

*ಮುಖ್ಯಮಂತ್ರಿಗಳ ಆಪ್ತಸಹಾಯಕನ ಆಸ್ತಿ 35 ಕೋಟಿ ಅಂತೆ; ನಿಜವೆ ರಾಮ್‌ಜಿ?*

ಶುದ್ಧ ಸುಳ್ಳು; ನನಗೆ ಬಂದ ವರದಿಯ ಪ್ರಕಾರ ಅದು 35 ಕೋಟಿ ಅಲ್ಲವೇ ಅಲ್ಲ 53!

ಮಾನಸ ಎಂ, ಶಿವಮೊಗ್ಗ

*ಸಮಯ ಎನ್ನುವುದು ಪ್ರಾಣಕ್ಕೆ ಸಮ ಎಂದು ನಮಗೆ ಅರಿವಾಗುವುದು ಯಾವಾಗ?*

ಆಂಬುಲೆನ್ಸ್ ಟ್ರಾಫಿಕ್ ಜ್ಯಾಂನಲ್ಲಿ ಸಿಲುಕಿದಾಗ!

ಮಲ್ಲಿಕಾರ್ಜುನ ಹ. ಬಗಲಿ, ಸಾಂಗಲಿ

*ಸತ್ಯ ಹರಿಶ್ಚಂದ್ರ ಮತ್ತೆ ಹುಟ್ಟಿಬಂದರೆ ಏನಾಗಬಹುದು?*

ಸ್ಮಶಾನ ಕಾಯುವ ಕೆಲಸಕ್ಕೂ ಜಾತಿ ಸರ್ಟಿಫಿಕೇಟ್ ನೀಡಬೇಕಾಗಬಹುದು!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು

*ಕೈಬರಹವನ್ನು ಅಳಿಸಿ ಪುನಃ ಬರೆಯಬಹುದು; ಹಣೆಬರಹವನ್ನು?*

ಅದೇನು ಮಹಾ! ಪ್ಲಾಸ್ಟಿಕ್ ಸರ್ಜರಿಯ ಮೂಲಕ ಹಣೆಯನ್ನೇ ಬದಲಾಯಿಸಿದರಾಯ್ತು!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ನಮ್ಮ ರಾಜಕಾರಣದಲ್ಲಿ ಕುಂಭಕರ್ಣರಿಗಿಂತ ವಿಭೀಷಣರ ಸಂಖ್ಯೆಯೇ ಅಧಿಕವಾಗುತ್ತಿದೆಯಲ್ಲಾ ರಾಮ್‌ಜೀ?*

ನಿಜ. ಇವರು ಚಂದ್ರವಂಶದವರು; ಹದಿನೈದು ದಿನಕ್ಕೊಮ್ಮೆ ಪಕ್ಷ ಬದಲಿಸಲೇ ಬೇಕು!

## ಬಹುಮಾನಿತ ಪ್ರಶ್ನೆ

ಎಚ್.ಸಿದ್ಧಾರ್ಥ ಹೆಬ್ಬಾರ್, ಈದು

*ಜಾಣ ಮೌನಕ್ಕೂ, ದಿವ್ಯ ಮೌನಕ್ಕೂ ಇರುವ ವ್ಯತ್ಯಾಸವೇನು?*

ಗಂಡನತ್ತ ತೋರುವುದು ಜಾಣ ಮೌನ, ಅತ್ತೆಯತ್ತ ತೋರುವುದು ದಿವ್ಯ ಮೌನ!

ಎನ್.ವಿ. ಶ್ರೀನಿವಾಸ್, ಮೈಸೂರು

*ಹೆಂಡತಿ ಸೀತೆಯನ್ನೇ ನಂಬದ ಶ್ರೀರಾಮ ಸಾಮಾನ್ಯ ಪ್ರಜೆಯ ಮಾತನ್ನು ಹೇಗೆ ನಂಬಿದ?*

ಎಷ್ಟೋ ಬಾರಿ ಬಾಲ್ ಟಚ್ ಆಗಿಲ್ದೇ ಇದ್ರೂ ಬೌಲರ್‌ನ ಅಪೀಲ್‌ನ ಅಬ್ಬರಕ್ಕೆ ಮಣಿದು ಅಂಪೈರ್ ಔಟ್ ಕೊಟ್ಬಿಡ್ತಾನೆ. ಶ್ರೀರಾಮನೂ ಅಂತಹ ಒಬ್ಬ ಅಂಪೈರ್!


ಶರಣಪ್ಪ ಜಿ. ಚಟ್ನಿ, ಗೋಲಗೇರಿ

*ಹೆಂಡತಿಯೊಬ್ಬಳು ಮನೆಯೊಳಗೆ ಇರದಿದ್ದರೆ...?*

ನನಗದು ಕೋಟಿ ರೂಪಾಯಿ ಎಂದನಂತೆ ವಿಚ್ಛೇದನ ವಕೀಲ.

ಮೊಳಕಾಲ್ಮೂರು ಸುರೇಶ, ಬಳ್ಳಾರಿ

*ಅಲ್ರಣ್ಣ, ಸಮುದ್ರ ಭೋರ್ಗರೆಯುವುದರ ರಹಸ್ಯ ಹೇಳಣ್ಣ...?*



ಬೀಚ್‌ಗಳಲ್ಲಿ ಭೂದೇವಿಯನ್ನು ಕಂಡು ಸಮುದ್ರರಾಜ ಹಾಡುವ ಹಾಡೇ ಭೋರ್ಗರೆತ!

ಎ.ಆರ್. ಪವನ್‌ಕುಮಾರ್, ಬಳ್ಳಾರಿ

*ತಾಯಿಗೂ, ಹೆಂಡತಿಗೂ ಏನು ವ್ಯತ್ಯಾಸ?*

ಕಡಿಮೆಯೆಂದರೆ ಇಪ್ಪತ್ತು ವರ್ಷಗಳು!

ಮಹಾಲಿಂಗ ಎಂ. ಗೋರಬಾಳ, ಮಾಣಿಕವಾಡಿ

*ತುಂಡುಬಟ್ಟೆ ಮತ್ತು ಅನ್ನ ಸಾಕೆಂದು ತಿಳಿದವರು ಇದ್ದಾರಾ...?*

ತುಂಡುಬಟ್ಟೆ ಮತ್ತು ಡಯಟ್ ಸಾಕೆಂದು ತಿಳಿದವರು ಇದ್ದಾರೆ– ಹೀರೋಯಿನ್‌ಗಳು!

ಪಿ.ಎನ್. ಶ್ರೀವತ್ಸ, ಬೆಂಗಳೂರು

*ಸಾಮಾನ್ಯವಾಗಿ ತಾಯಿಗಿಂತ ತಂದೆಯೇ ಮೊದಲು ಸಾವನ್ನಪ್ಪುವುದರ ಕಾರಣ...?*

ಮುಂದಿನ ಜನ್ಮದಲ್ಲಿ ಇದೇ ಹೆಣ್ಣನ್ನು ವರಿಸಲು ಅವಳಿಗಿಂತ ಮೊದಲು ಹುಟ್ಟಬೇಕಲ್ಲಾ, ಅದಕ್ಕೇ ಫಸ್ಟ್ ಎಕ್ಸಿಟ್!

■ ರಾಮ್